29/3/22. Rule-330

**ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಕೆ.ಎ.ತಿಪ್ಪೇಸ್ವಾಮಿ & ಶ್ರೀ ಎಸ್. ಎಲ್. ಭೋಜೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳು-ಇವರು ನಿಯಮ 330 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:-** ರಾಜ್ಯದ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವರ್ಷಕ್ಕೆ 2 ಕೋಟಿ ರೂ.ಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. MLA ರವರಿಗೆ 5 ವರ್ಷ MLC ರವರಿಗೆ 6 ವರ್ಷ ಪದಾಧಿಕಾರದವಧಿ ಇರುತ್ತದೆ. ಸದರಿ ಅವಧಿಯಲ್ಲಿ ಬಿಡುಗಡೆಯಾಗುವ ಈ ಅನುದಾನವನ್ನು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಖರ್ಚು ಮಾಡಲಾಗುತ್ತದೆ. ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಅನುಷ್ಠಾನ ಏಜೆನ್ಸಿ ಇಂಜಿನಿಯರಿಂಗ್ ವಿಭಾಗಗಳಿಂದ 2 ವರ್ಷಗಳದೊಳಗೆ ಅವಧಿಗಳೊಳಗೆ ಅನುದಾನವನ್ನು ಖರ್ಚು ಮಾಡಲು ಕಷ್ಟ ಸಾಧ್ಯವಿರುತ್ತದೆ. ಸದಸ್ಯರ ಪದಾಧಿಕಾರದವಧಿಯಲ್ಲಿ ತಮ್ಮ ಒಟ್ಟು ಎಲ್ಲಾ ಅನುದಾನವನ್ನು ಖರ್ಚು ಮಾಡುವುದು ವಾಡಿಕೆಯಾಗಿರುತ್ತದೆ.

ಆದರೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕರು ದಿನಾಂಕ:17.02.2022 ರಂದು ಪಿಡಿಎಸ್ 82 ಕೆಎಲ್ಎಸ್ 2022 (ಭಾಗ-1) ಪತ್ರದಲ್ಲಿ ಮಾನ್ಯ ಸಭಾಪತಿಯವರನ್ನು ಬಿಟ್ಟು ಸಭೆ ನಡೆಸಿ ನಿರ್ಧಾರ ಕೈಗೊಂಡು ಮಾನ್ಯ ವಿಧಾನ ಪರಿಷತ್ ಸದಸ್ಯರ ಅಧಿಕಾರವನ್ನು ಮೊಟಕುಗೊಳಿಸಿ, 2 ವರ್ಷಗಳಿಗೆ ಮಾತ್ರ ಸೀಮಿತಗೊಳಿಸಿ ನಮ್ಮ ಅನುದಾನವನ್ನು ಹಿಂಪಡೆಯುವ ಆದೇಶ ಮಾಡಿರುವುದು ನಿಜಕ್ಕೂ ದುರದೃಷ್ಟಕರ. ಆದ್ದರಿಂದ ಈ ಆದೇಶವನ್ನು ರದ್ದುಗೊಳಿಸುವುದರೊಂದಿಗೆ ಇದರ ಸಂಬಂಧ ಮಾನ್ಯ ಸಭಾಪತಿಯವರು ದಿನಾಂಕ:21.02.2022 ರಂದು ಬರೆದಿರುವ ಪತ್ರದಂತೆ ಆದೇಶ ಹೊರಡಿಸಬೇಕೆಂದು ಮಾನ್ಯ ತೋಟಗಾರಿಕೆ ಯೋಜನೆ ಹಾಗೂ ಸಾಂಖ್ಯಿಕ ಸಚಿವರೊಂದಿಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

******

**ಉತ್ತರ:-**

ಕರ್ನಾಟಕ ಸರ್ಕಾರವು, ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು 2013-14ನೇ ಸಾಲಿನಿಂದ ಪ್ರತಿ ಕ್ಷೇತ್ರಕ್ಕೆ ರೂ.200.00 ಲಕ್ಷಗಳಿಗೆ ನಿಗದಿಪಡಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು 2014-ರಲ್ಲಿ ಪರಿಷ್ಕೃತ ಮಾರ್ಗಸೂಚಿ ಹೊರಡಿಸಲಾಗಿದ್ದು, ಸದರಿ ಮಾರ್ಗಸೂಚಿ ಕಂಡಿಕೆ-4.1 ರಲ್ಲಿ ಈ ಕೆಳಕಂಡಂತೆ ಸೂಚಿಸಲಾಗಿದೆ.

"ಯೋಜನಾ ಇಲಾಖೆಯು ನೋಡಲ್ ಜಿಲ್ಲಾಧಿಕಾರಿಗಳಿಗೆ ಅನುಷ್ಠಾನದಲ್ಲಿರುವ ಕಾಮಗಾರಿಗಳ ವಾಸ್ತವಿಕ ಮತ್ತು ಹಣಕಾಸು ಪ್ರಗತಿಯ ಆಧಾರದ ಮೇಲೆ ಹಾಗೂ ಕಾಮಗಾರಿಗಳಿಗೆ ಇನ್ನೂ ಹೆಚ್ಚಿನ ನಿಧಿಗಳ ಅಗತ್ಯತೆಯ ಆಧಾರದ ಮೇಲೆ ನಿಧಿಯನ್ನು "ವರ್ಷಕ್ಕೆ ಎರಡು ಕಂತುಗಳಲ್ಲಿ" ಬಿಡುಗಡೆ ಮಾಡತಕ್ಕದ್ದು, ನಿರ್ದಿಷ್ಟ ವರ್ಷದಲ್ಲಿ ಬಿಡುಗಡೆಯಾದ ನಿಧಿಗಳ ಪೈಕಿ ಬಳಕೆಯಾಗದೆ ಉಳಿದ ಹಣ ಜಿಲ್ಲಾಧಿಕಾರಿಗಳ ಬಳಿ ಇದ್ದರೆ, ಅದನ್ನು "ಮುಂದಿನ ವರ್ಷಕ್ಕೆ ಮಾತ್ರ ಉಪಯೋಗಿಸಬಹುದಾಗಿದೆ". ಆ ಮೊತ್ತವು ಮುಂದಿನ ವರ್ಷದಲ್ಲಿ ಕೊನೆಯಲ್ಲಿ ಖರ್ಚಾಗದೆ ಉಳಿದರೆ ಆ ಮೊತ್ತವನ್ನು ರದ್ದು ಪಡಿಸಲಾಗುವುದು. ಅಲ್ಲದೆ ಆ ವರ್ಷದಲ್ಲಿ ನಿಧಿಗಳನ್ನು ಕ್ಲೇಮು ಮಾಡದಿದ್ದಲ್ಲಿ, "ಹಣಕಾಸು ವರ್ಷದ ಕೊನೆಯಲ್ಲಿ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು" ಎಂದು ಉಲ್ಲೇಖಿಸಲಾಗಿದೆ. ಅನುಬಂಧ-1.

...2

ಅದರಂತೆ, ಮಾನ್ಯ ವಿಧಾನ ಪರಿಷತ್ತಿನ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ದಿನಾಂಕ:13.08.2021 ರಂದು ಐದು ಜಿಲ್ಲಾಧಿಕಾರಿಗಳು ಮತ್ತು ಐವರು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರನ್ನೊಳಗೊಂಡ ಸಮಿತಿಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ 1) ಶ್ರೀ ಕೆ.ಸಿ.ಕೊಂಡಯ್ಯ, 2) ಶ್ರೀ ಎನ್. ರವಿ, 3) ಶ್ರೀ ನಿರಾಣಿ ಹಣಮಂತ್ ರುದ್ರಪ್ಪ 4) ಎನ್. ಅಪ್ಪಾಜಿ ಗೌಡ ಹಾಗೂ 1) ರಾಮನಗರ, 2) ಕೋಲಾರ, 3) ಚಿಕ್ಕಬಳ್ಳಾಪುರ, 4) ಬೆಂಗಳೂರು ಗ್ರಾಮಾಂತರ ಮತ್ತು 5) ಬೆಂಗಳೂರು ನಗರ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಇವರುಗಳನ್ನೊಳಗೊಂಡ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ಪ್ರಾರಂಭವಾಗದೆ ಇರುವ ಕಾಮಗಾರಿಗಳ ಅನುದಾನವನ್ನು ಹಿಂಪಡೆಯಲು ನಿರ್ಣಯಕೈಗೊಂಡಿದ್ದು, ಸದರಿ ನಿರ್ಣಯದಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ, ದಿನಾಂಕ:09.08.2021 ರಂದು ಆರ್ಥಿಕ ಇಲಾಖೆಯ ಹಿಂಬರಹದನ್ವಯ ಬ್ಯಾಂಕ್ ಖಾತೆ ತೆರೆದು, ಪ್ರಾರಂಭವಾಗದೇ ಇರುವ ಕಾಮಗಾರಿಗಳ ಅನುದಾನವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮವಹಿಸಲಾಗಿದೆ. ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ದಿನಾಂಕ:13.08.2021ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆ ಅಂಶಗಳು ಈ ಕೆಳಕಂಡಂತಿದೆ:-

1. 2021-22ನೇ ಸಾಲಿಗೆ ರೂ.2.00 ಕೋಟಿಗಳಿಗೆ ಕ್ರಿಯಾಯೋಜನೆ ತಯಾರಿಸಲು ಸಹಮತಿ ನೀಡಿದೆ. ಆದ್ದರಿಂದ, ಕೂಡಲೇ ಎಲ್ಲಾ ಜಿಲ್ಲಾಧಿಕಾರಿಗಳು ರೂ.2.00 ಕೋಟಿಗಳಿಗೆ ಕ್ರಿಯಾ ಯೋಜನೆ ರೂಪಿಸಿ ಅನುಮೋದನೆ ನೀಡುವುದು.

2. KLLADS ಮಾರ್ಗಸೂಚಿಗಳ ಕಂಡಿಕೆ 3.2 ರ ಅನುಸಾರ ಕ್ರಿಯಾ ಯೋಜನೆಯನ್ನು ಪ್ರತಿ ವರ್ಷ ಜೂನ್ ಅಂತ್ಯದೊಳಗೆ ಅಂತಿಮಗೊಳಿಸತಕ್ಕದ್ದು. ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ/ಬಿಡುಗಡೆಯಾಗುವ **(ಶಾಸಕರುವಾರು ಬಿಡುಗಡೆಯಾಗುವುದಿಲ್ಲ)** ಅನುದಾನದಲ್ಲಿ ಭರಿಸತಕ್ಕದ್ದು.

3. ಇನ್ನು ಮುಂದೆ ಯೋಜನಾ ಇಲಾಖೆಯು ಅನುದಾನವನ್ನು ಕ್ಷೇತ್ರವಾರು ಬಿಡುಗಡೆ ಮಾಡುವ ಬದಲಾಗಿ ಜಿಲ್ಲಾವಾರು ಬಿಡುಗಡೆ ಮಾಡಲು ಕ್ರಮವಹಿಸುತ್ತದೆ. ಆದ್ದರಿಂದ, ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿ ಲಭ್ಯವಿರುವ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ರೂ.2.00 ಕೋಟಿಗಳ ಮಿತಿಯಲ್ಲಿ ಕಾಮಗಾರಿಗಳ ಪ್ರಗತಿ ಆಧರಿಸಿ ಹಣ ಪಾವತಿಸಲು ಸೂಕ್ತ ಕ್ರಮವಹಿಸುವುದು.

4. 2020-21ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00 ಕೋಟಿಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿತ್ತು, ಹೆಚ್ಚುವರಿಯಾಗಿ ಬಿಡುಗಡೆಯಾಗಿರುವ ಅನುದಾನ ಪತ್ರ ಕ್ಷೇತ್ರಕ್ಕೆ ರೂ.1.00 ಕೋಟಿಯನ್ನು 2019-20ನೇ ಸಾಲಿಗೆ ವರ್ಗಾಯಿಸಿಕೊಂಡು ಕಾಮಗಾರಿಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವುದು.

5. 2018-19ನೇ ಸಾಲಿಗೆ ಸಂಬಂಧಿಸಿದಂತೆ ಪ್ರತಿ ಕ್ಷೇತ್ರಕ್ಕೆ ಬಿಡುಗಡೆಗೆ ಬಾಕಿ ಇರುವ (ರೂ.127.69 ಕೋಟಿಗಳನ್ನು) ನಾಲ್ಕನೇ ಕಂತಿನ ಬಂಡವಾಳ ವೆಚ್ಚದ ಅನುದಾನವನ್ನು ಬಿಡುಗಡೆಗೊಳಿಸಲು ಪ್ರಸ್ತುತ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡಿದ ನಂತರ ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

6. KLLADS ಮಾರ್ಗಸೂಚಿ ಪ್ಯಾರ 4.1 ರಂತೆ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಪ್ರಾರಂಭವಾಗದೇ ಉಳಿದಿರುವ ಕಾಮಗಾರಿಯ ಅನುದಾನವನ್ನು ಕೂಡಲೇ ರಾಜ್ಯ ಮಟ್ಟದ ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆಗೊಳಿಸತಕ್ಕದ್ದು. ಅನುಬಂಧ-2.

ಇದೇ ವಿಷಯದ ಬಗ್ಗೆ ಬೆಳಗಾಂ ವಿಧಾನಸಭಾ ಅಧಿವೇಶನದಲ್ಲಿ ಚರ್ಚಿಸಲಾಗಿದ್ದು, ಮಾನ್ಯ ವಿಧಾನ ಸಭಾಧ್ಯಕ್ಷರು ದಿನಾಂಕ:21.12.2021 ರಂದು ಪತ್ರ ನೀಡಿ, ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿರುವುದನ್ನು ತಡೆಹಿಡಿಯುವಂತೆ ಕೋರಿರುತ್ತಾರೆ. ಸದರಿ ಸೂಚನೆಯ ಮೇರೆಗೆ ಕೆಲ್ಯಾಡ್ಸ್ ಅನುದಾನವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುವುದನ್ನು ತಾತ್ಕಾಲಿಕವಾಗಿ ಹಾಗು ಮುಂದಿನ ಆದೇಶದವರೆಗೂ ತಡೆಹಿಡಿಯಲಾಗಿತ್ತು. ತದನಂತರ, ದಿನಾಂಕ:27.01.2022 ರಂದು ಮಾನ್ಯ ವಿಧಾನಸಭೆಯ ಸಭಾಪತಿಗಳ ಹಾಗೂ ಮಾನ್ಯ ಯೋಜನಾ ಸಚಿವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿದೆ.

1. ಪ್ರಸ್ತುತ ವಿಧಾನಸಭೆಯ ಶಾಸಕರು 2018 ರಲ್ಲಿ ಆಯ್ಕೆಯಾಗಿ ಬಂದಿರುವುದರಿಂದ, ಈ ವರ್ಷ ವಿಶೇಷ ಪ್ರಕರಣವೆಂದು ಪರಿಗಣಿಸಿ ಕಂಡಿಕೆ-4.1 ಅನುದಾನ ಸಡಿಲಗೊಳಿಸಿ 2018-19 ರಿಂದ 2020-21ರ ಸಾಲಿಗೆ ಸಂಬಂಧಪಟ್ಟ ಕಾಮಗಾರಿಗಳು ಈಗಲೂ ಪ್ರಾರಂಭವಾಗದೇ ಇದ್ದಲ್ಲಿ ಸದರಿ ಕಾಮಗಾರಿಗಳನ್ನು ಸಂಬಂಧಪಟ್ಟ ಡಿಸಿ/ಎಡಿಸಿ/ಎಸಿ ರವರುಗಳಿಂದ ಹಾಗೂ ಅನುಷ್ಠಾನಾಧಿಕಾರಿಗಳಿಂದ ಕಾಮಗಾರಿಗಳನ್ನು ಮಾರ್ಚ್ 2022ರ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವುದು ಹಾಗೂ ಇದಕ್ಕೆ ಸಂಬಂಧಪಟ್ಟ ಅನುದಾನವನ್ನು ಯಥಾಃ ಸ್ಥಿತಿಯಲ್ಲಿ ಮುಂದುವರೆಸುವುದು.

2. 2018 ರ ಹಿಂದಿನ ಅವಧಿಯಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳು ಪ್ರಾರಂಭವಾಗದೇ ಇದ್ದಲ್ಲಿ ಅಂತಹ ಕಾಮಗಾರಿಗಳ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಉಳಿತಾಯ ಖಾತೆಗೆ ಜಮೆ ಮಾಡಲು, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲು ನಿರ್ಣಯಿಸಲಾಯಿತು. ಸದರಿ ನಿರ್ಣಯದ ಪ್ರತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಅದರಂತೆ, 2018 ರ ಹಿಂದಿನ ಅವಧಿಯಲ್ಲಿ ಆರಂಭವಾಗದೆ ಇರುವ ಕಾಮಗಾರಿಗಳ ಅನುದಾನವನ್ನು ವಾಪಸ್ಸು ಪಡೆಯಲು ಹಾಗೂ ಆರಂಭವಾಗಿರುವ ಕಾಮಗಾರಿಗಳನ್ನು ದಿನಾಂಕ:30.03.2022 ರ ಅಂತ್ಯದೊಳಗೆ ಪೂರ್ಣಗೊಳಿಸಲು ದಿನಾಂಕ:17.02.2022 ರ ಪತ್ರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ ಇವರು ತಿಳಿಸಿರುತ್ತಾರೆ. ಅನುಬಂಧ-4.

ಆದ್ದರಿಂದ, ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ-ಇವರು ಪತ್ರದ ಮೂಲಕ ನೀಡಿರುವ ನಿರ್ದೇಶನವು ಮಾನ್ಯ ವಿಧಾನಸಭೆ ಹಾಗೂ ವಿಧಾನ ಪರಿಷತ್ ಅಧ್ಯಕ್ಷರ ಸಹಮತಿಯ ಮೇರೆಗೆ ಸರ್ಕಾರವು ಕೈಗೊಂಡ ತೀರ್ಮಾನವಾಗಿದ್ದು, ಸದರಿ ತೀರ್ಮಾನವು ಕ್ರಮಬದ್ಧವಾಗಿರುತ್ತದೆ ಎಂಬ ಅಂಶವನ್ನು ಸದನದ ಗಮನಕ್ಕೆ ತರಲಾಗಿದೆ.

**ಸಂಖ್ಯೆ**:ಪಿಡಿಎಸ್ 31 ಕೆಎಲ್ಎಸ್ 2022.

(ಮುನಿರತ್ನ)
ಮಾನ್ಯ ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು.